**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 521/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರುದ್ರೇಶ | ಪ್ರಾ.ಸಾಃ 4 |
| ತಂದೆಯ/ಗಂಡನ ಹೆಸರು | : | ಚಿತ್ತಪ್ಪ | ಚಾಸಾಃ 6 |
| ವಯಸ್ಸು | : | 38 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ರಾಮಗಿರಿ | ದಿಃ16.04.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಚಾಸಾ.1 ನನ್ನ ಮಾವ. ಚಾಸಾ.4 ನನ್ನ ಅಳಿಯ. ಚಾಸಾ.5 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

2. ದಿ.07.08.2023 ರಂದು ಸಂಜೆ 4 ಗಂಟೆ ಸಮಯದಲ್ಲಿ ಗೊಲ್ಲರಹಟ್ಟಿ ಕ್ಯಾಂಪಿನ ಜಮೀನಿನ ಬಳಿ ಚಾಸಾ.1 ಮತ್ತು 4 ರವರು ಇದ್ದಾಗ ಆರೋಪಿತರು ಸದರಿ ಸ್ಥಳಕ್ಕೆ ಬಂದು ದಾರಿಯ ವಿಚಾರದ ಕುರಿತು ಗಲಾಟೆ ಮಾಡಿ 3 ನೇ ಆರೋಪಿ ಎಡೆ ಮಟ್ಟೆಯಿಂದ ಚಾಸಾ.1 ಮತ್ತು 4 ರವರಿಗೆ ಹೊಡೆದಿರುತ್ತಾರೆ. ಚಾಸಾ.1 ರವರ ಮೊಣಕಾಲಿಗೆ ಮತ್ತು ಚಾಸಾ.4 ರವರ ಮೊಣಕಾಲಿಗೆ ಎಡೆಮಟ್ಟೆಯಿಂದ ಹೊಡೆದಿರುತ್ತಾರೆ. ಇತರೆ ಆರೋಪಿತರು ಕೈಯಿಂದ ಹೊಡೆದಿದ್ದಾರೆ. ಅಷ್ಟರಲ್ಲಿ ನಾನು ಮತ್ತು ನನ್ನ ಅಣ್ಣನಾದ ವಿರುಪಾಕ್ಷ ರವರು ಹೋಗಿ ಗಲಾಟೆ ಬಿಡಿಸಿರುತ್ತೇವೆ. ನಂತರ ಚಾಸಾ.1 ಮತ್ತು 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.1 ರ ಎಡೆಮಟ್ಟೆಯನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

3. ಎಲ್ಲಾ ಆರೋಪಿತರು ಗಲಾಟೆಯ ಸಮಯದಲ್ಲಿ ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಎಲ್ಲಾ ಆರೋಪಿತರು ಚಾಸಾ.1 ಮತ್ತು 4 ರವರಿಗೆ ಬೋಳಿಮಕ್ಕಳ ಮತ್ತು ಸೂಳೆ ಮಕ್ಕಳ ಎಂದು ಕೆಟ್ಟ ಮಾತುಗಳಿಂದ ಬೈದಿರುತ್ತಾರೆ ಎಂದರೆ ಸರಿ. ಎಲ್ಲಾ ಆರೋಪಿತರು ಚಾಸಾ.1 ಮತ್ತು 4 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಚಾಸಾ.5 ರವರು ನನ್ನೊಂದಿಗೆ ಬಂದು ಗಲಾಟೆಯನ್ನು ಬಿಡಿಸಿರುತ್ತೇವೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರಿ ಸಿ.ಓ.ಎಂ. ವಕೀಲರಿಂದ**

4. ಚಾಸಾ.1 ನನ್ನ ಮಾವ ಮತ್ತು ಚಾಸಾ.4 ನನ್ನ ಅಳಿಯ. ಸದರಿ ಜಮೀನು ನನ್ನ ತಾಯಿಯಾದ ಚಂದ್ರಮ್ಮರವರಿಗೆ ಸೇರಿದ್ದು. ಸದರಿ ಜಮೀನನ್ನು ನನ್ನ ಮಾವನಾದ ಚಾಸಾ.1 ರವರಿಗೆ ಬಿಟ್ಟಿದ್ದೆವು. ದಾರಿಯ ವಿಚಾರವಾಗಿ ಗಲಾಟೆ ಆಗಿರುತ್ತದೆ. ಗಲಾಟೆಯಾಗಿದೆ ಎಂದು ದೂರವಾಣಿ ಕರೆ ಮೂಲಕ ತಿಳಿಸಿದ ನಂತರ ನಾನು ರಾಮಗಿರಿಯನ್ನು ಬಿಟ್ಟಿರುತ್ತೇನೆ. ಮದ್ಯಾಹ್ನ 3.30 ಕ್ಕೆ ನನಗೆ ಗಲಾಟೆಯ ಕುರಿತು ತಿಳಿದಿರುತ್ತದೆ. ರಾಮಗಿರಿಯಿಂದ ಗೊಲ್ಲರಹಟ್ಟಿ ಕ್ಯಾಂಪಿಗೆ 10.50 ಕಿ.ಮೀ. ಇದೆ. ರಾಮಗಿರಿಯಿಂದ ಗೊಲ್ಲರಹಟ್ಟಿ ಕ್ಯಾಂಪಿಗೆ ನೇರವಾಗಿ ಬಸ್ಸಿನ ಸಂಪರ್ಕ ಇಲ್ಲ ಎಂದರೆ ಸರಿ. ನನಗೆ ಮಾಹಿತಿ ಬಂದ ನಂತರ ನಾನು ಮತ್ತು ನನ್ನ ಅಣ್ಣನಾದ ವಿರುಪಾಕ್ಷ ರವರು ಸ್ಥಳಕ್ಕೆ ಬಂದಿರುತ್ತೇವೆ. ನಾವು ಬಂದ ನಂತರ ಚಾಸಾ.1 ಮತ್ತು 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಾವು ಸ್ಥಳಕ್ಕೆ ಬಂದಾಗ ಗಲಾಟೆ ಆಗಿತ್ತು. ನಾವು ಸ್ಥಳಕ್ಕೆ ಹೋದಾಗ ಮದ್ಯಾಹ್ನ 3.45 ಆಗಿತ್ತು. ನಾವು ಸಂಜೆ 4.30 ಕ್ಕೆ ಆಸ್ಪತ್ರೆಗೆ ಹೋಗಿರುತ್ತೇವೆ. ಚಾಸಾ.1 ಮತ್ತು 4 ರವರನ್ನು ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿದ್ದೆವು. ಪೊಲೀಸರು ಆಸ್ಪತ್ರೆಗೆ ಯಾವಾಗ ಬಂದರು ಎಂದು ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋದಾಗ ಚಾಸಾ.5 ರವರು ಇರಲಿಲ್ಲ ಎಂದರೆ ಸರಿ. ಮು.ಮಾ.1 ರ ಎಡೆಮಟ್ಟೆ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ನಾನು ನೀಡಿದ ಹೇಳಿಕೆಯನ್ನು ಪೊಲೀಸರು ಕೈಯಲ್ಲಿ ಬರೆದುಕೊಂಡರು. ಸಂಜೆ 5 ಗಂಟೆಗೆ ನಾನು ನೀಡಿದ ಹೇಳಿಕೆಯನ್ನು ಬರೆದುಕೊಂಡರು. ಪೊಲೀಸರು ನನ್ನ ಮತ್ತು ನನ್ನ ಅಣ್ಣನ ಸಹಿಯನ್ನು ಪಡೆದುಕೊಂಡರು. ನಮ್ಮ ಸಹಿಯನ್ನು ಪಡೆದುಕೊಂಡ ಪೊಲೀಸರ ಹೆಸರು ಗೊತ್ತಿಲ್ಲ. ಪೊಲೀಸರು ಮರುದಿನ ನನ್ನನ್ನು ವಿಚಾರಣೆ ಮಾಡಿಲ್ಲ. ಪೊಲೀಸರು ಬೆರಳಚ್ಚು

ಮಾಡಿದ ದಾಖಲಾತಿಗೆ ನನ್ನ ಸಹಿಯನ್ನು ಪಡೆದುಕೊಂಡಿಲ್ಲ. ನಾನು ಸ್ಥಳಕ್ಕೆ ಹೋಗುವಾಗ ಎಲ್ಲಾ ಗಲಾಟೆ ಮುಗಿದಿತ್ತು ಎಂದರೆ ಸರಿ. ಹಾಗಾಗಿ ನನಗೆ ಚಾಸಾ.1 ಮತ್ತು 4 ರವರಿಗೆ ಯಾರು ಹೊಡೆದರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿತರು ಜಮೀನಿನಲ್ಲಿ ಅಳವಡಿಸಿದ್ದ ವಿದ್ಯುತ್ ಪರಿವರ್ತಕ ಮತ್ತು ಕಲ್ಲು ತಂತಿಯನ್ನು ತೆರವುಗೊಳಿಸುವ ಬಗ್ಗೆ ನೀಡಿದ ಮನವಿಪತ್ರದ ಕುರಿತು ಸ್ಥಳ ಪರಿಶೀಲನೆ ಮಾಡಲು, ತಹಶೀಲ್ದಾರ್, ಹೊಳಲ್ಕೆರೆರವರು ಸದರಿ ದಿನದಂದು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ನಾನು ಸ್ಥಳಕ್ಕೆ ಬಂದಾಗ ತಹಶೀಲ್ದಾರ್‌ರವರು ಹೋಗಿದ್ದರು ಎಂದರೆ ಸರಿ. ನನಗೆ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲದಿದ್ದರೂ, ದಾರಿ ಬಿಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ